**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ**
**ನ್ಯಾಯಾಲಯ ಖಾನಾಪೂರ**
**ಸಿ.ಸಿ. ನಂಃ 658/2011**

ಕರ್ನಾಟಕ ಸರ್ಕಾರ ...ಪಿರ್ಯಾದಿ.

-:ವಿರುದ್ಧ:-

ಆ-1. ಶಿವನಪ್ಪಾ ಬಸವಣ್ಣೆಪ್ಪಾ ಅಂಗಡಿ
ವಯಸ್ಸುಃ 56 ವರ್ಷ, ಉದ್ಯೋಗಃ ಹಾಲಿ (ಪೋಸ್ಟಮಾಸ್ಟರ)
ಸಾಃ ಚಾಪಗಾಂವ ಗ್ರಾಮ,
ತಾಃ ಖಾನಾಪೂರ ಜಿಃ ಬೆಳಗಾವಿ

...ಆರೋಪಿ .

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆ.

1. ನೀವು ನ್ಯಾಯಾಲಯದ ಮುಂದೆ ಸಾಕ್ಷಿದಾರರು ನೀಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ

2. ಪ್ರಾ.ಸಾ-1 ರುಕ್ಮುದ್ದಿನ ಅಬ್ದುಲ ಮುಜಾವರ, ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು ಅಂಚೆ ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದಾಗ ತಮ್ಮ ಮೇಲಾಧಿಕಾರಿಗಳಾದ ಅಂಚೆ ಅಧೀಕ್ಷಕರು ಬೆಳಗಾವಿ ಜಿಲ್ಲೆ ಬೆಳಗಾವಿ ರವರು ಚಾಪಗಾಂವ ಅಂಚೆ ಉಪ ಕಛೇರಿಯಲ್ಲಿ ಪೊಸ್ಟ ಮಾಸ್ಟರಾಗಿದ್ದ ಆರೋಪಿಯು ಅಂಚೆ ಕಛೇರಿಯ ಶುಲ್ಕು ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾನೆ ಎಂಬ ಬಗ್ಗೆ ದೂರನ್ನು ನೀಡುಲು ತಿಳಿಸಿದಾಗ ತಾನು ನಂದಗಡ ಪೋಲಿಸ್ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಕೊಟ್ಟಿರುತ್ತೇನೆ. ಅದೇ ದಿನ ಚಾ.ಸಾ-4 ಮತ್ತು 5 ರವರ ಸಮಕ್ಷಮ ಅದೇ ದಿನ ಪೋಲಿಸರು ಜಪ್ತು ಪಂಚನಾಮೆ ಮಾಡಿಕೊಂಡಿರುತ್ತಾರೆ. ನಂತರ ತಾನು ದಿನಾಂಕ 10-02-2011 ರಂದು ಪಂಚನಾಮೆಯ ಕಾಲದಲ್ಲಿ ಪಂಚನಾಮೆಗೆ ಪೋಲಿಸರಿಗೆ ಜಾಗೆಯನ್ನು ತೋರಿಸಿರುತ್ತೇನೆ. ಈ ಬಗ್ಗೆ ತಾನು ಪೋಲಿಸರಿಗೆ ಹೇಳಿಕೆ ಸಹ ನೀಡಿದ್ದೇನೆ ಎಂದು ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

3. ಪ್ರಾ.ಸಾ-5 ಆನಂದ ವೆಂಕಟೇಶ ಖಾಗಾರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು ಬೆಳಗಾವಿ ದಕ್ಷಿಣ ಉಪವಿಭಾಗದಲ್ಲಿ ಅಂಚೆ ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದು, ಬೆಳಗಾವಿ ದಕ್ಷಿಣ

ವಿಭಾಗ ವ್ಯಾಪ್ತಿಯಲ್ಲಿ ಖಾನಾಪೂರ ತಾಲೂಕಿನ ಎಲ್ಲ ಅಂಚೆ ಕಛೇರಿಗಳು ಬರುತ್ತವೆ. ಚಾಪಗಾಂವ ಶಾಖೆಯು ಕೂಡ ಬರುತ್ತದೆ, ಸದರಿ ಚಾಪಗಾಂವ ಶಾಖೆಯಲ್ಲಿ ಆರೋಪಿಯು ಬ್ರಾಂಚ್ ಪೊಸ್ಟಮಾಸ್ಟರ ಕೆಲಸ ಮಾಡುತ್ತಿದ್ದವರು. ಆರೋಪಿಯು ಸುಮಾರು ಮೂರು ತಿಂಗಳಿಂದ ಮನಿಅರ್ಡರ ಹಣವನ್ನು ಹಂಚಿಲ್ಲ ಎಂದು ತಮ್ಮ ಮೇಲಾಧಿಕಾರಿಳಾದ ಅಂಚೆ ಕಛೇರಿಗಳ ಸೀನಿಯರ ಸುರಿನಟೆಂಡೆಂಟ ವಿಚಾರಣೆ ಮಾಡಿ ವರದಿ ಸಲ್ಲಿಸಲು ಸೂಚಿಸಿದರು . ಈ ಪ್ರಕಾರ ತಾನು ದಿನಾಂಕ 10.04.2006 ರಂದು ಚಾಪಗಾಂವ ಶಾಖಾ ಅಂಚೆ ಕಛೇರಿಗೆ ಭೇಟಿ ಕೊಟ್ಟು ಬಿ.ಒ ಶಿಲ್ಕನ್ನು ಪರಿಶೀಲಿಸಿದಾಗ ಅದರಲ್ಲಿ 322-70 ಪೈಸ ಸ್ಟಾಂಪಗಳು ಮಾತ್ರ ಇದ್ದು ರೋಖ ಹಣ ಇರಲಿಲ್ಲ, ಈ ಬಗ್ಗೆ ಆರೋಪಿಗೆ ವಿಚಾರಿಸಿದಾಗ ಆತನು ಸದರಿ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿರುವಾಗಿ ತಿಳಿಸಿದನು.
ಆರೋಪಿಯು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದ ಕಾರಣ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಆರೋಪಿಯ ಸಹಿಯನ್ನು ಪಡೆದು ನಂತರ ಅವನ ಕೈಬರಹದಲ್ಲಿ ಅವನು ತನ್ನ ಹೇಳಿಕೆಯನ್ನು ಬರೆದುಕೊಟ್ಟನು. ಆರೋಪಿಯನ್ನು ಕೆಲಸದಿಂದ ಅಮಾನತ್ತುಗೊಳಿಸಿ ಚಾಪಗಾಂವ ಶಾಖಾ ಅಂಚೆ ಕಛೇರಿಯ ಚಾರ್ಜನ್ನು ಚಾ.ಸಾ-7 ರವರಿಗೆ ವಹಿಸಿಕೊಟ್ಟೆನು. ನಂತರ ಈ ಬಗ್ಗೆ ಎಲ್ಲ ದಾಖಲೆಗಳೊಂದಿಗೆ ತನ್ನ ಮೇಲಾಧಿಕಾರಿಗಳಿಗೆ ವರದಿ ನೀಡಿದೆನು ಎಂದು ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

4. ಪ್ರಾ.ಸಾ-7 ಮಾರುತಿ ಯಮನಪ್ಪ ಗೌರಣ್ಣವರ ರವರು, ತಾನು ಬೆಳಗಾವಿ ದಕ್ಷಿಣ ವಿಭಾಗ ವ್ಯಾಪ್ತಿಯಲ್ಲಿ ಮುಖ್ಯ ಅಂಚೆ ಕಛೇರಿಯಲ್ಲಿ ಮುಖ್ಯ ಟಪಾಲು ತಪಾಸಣೆಗಾರನಾಗಿ ಕೆಲಸ ಮಾಡುತ್ತಿದ್ದು, ತಮ್ಮ ಅಂಚೆ ಕಛೆರಿಯ ವ್ಯಾಪ್ತಿಯಲ್ಲಿ ಖಾನಾಪೂರ ತಾಲೂಕಿನ ಎಲ್ಲ ಅಂಚೆ ಕಛೇರಿಗಳು ಬರುತ್ತವೆ. ಅದೇ ರೀತಿ ಚಾಪಗಾಂವ ಶಾಖೆಯು ಕೂಡ ಬರುತ್ತದೆ, ಸದರಿ ಚಾಪಗಾಂವ ಶಾಖೆಯಲ್ಲಿ ಆರೋಪಿಯು ಬ್ರಾಂಚ್ ಪೊಸ್ಟಮಾಸ್ಟರ ಕೆಲಸ ಮಾಡುತ್ತಿದ್ದವರು. ಚಾಪಗಾಂವ ಶಾಖಾ ಅಂಚೆ ಕಛೇರಿಗೆ ಮನಿಅರ್ಡರ ತಲುಪಿಲ್ಲ ಎಂದು ಚಾಪಗಾಂವ ಮತ್ತು ವಡ್ಡೇಬೈಲ ಗ್ರಾಮದ ಸಾರ್ವಜನಿಕರು ದೂರು ಕೊಟ್ಟಿದ್ದರು. ಈ ಬಗ್ಗೆ ತಪಾಸಣೆ ಮಾಡಿದಾಗ ಅಂಚೆ ಕಛೇರಿಯ ಲೆಕ್ಕ ಪುಸ್ತಕವನ್ನು ಪರಿಶೀಲಿಸಿದಾಗ ಅದರಲ್ಲಿ ನಗದು ಹಣ ನಮೂದಿತ್ತು. ಆದರೆ ಆ ಹಣ ಅಂಚೆ ಕಛೇರಿಯಲ್ಲಿ ಇರಲಿಲ್ಲ, ಈ ಬಗ್ಗೆ ಆರೋಪಿಗೆ ವಿಚಾರಿಸಿದಾಗ ಆತನು ಸದರಿ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿರುವಾಗಿ ತಿಳಿಸಿದನು.

ಆರೋಪಿಯು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದ ಕಾರಣ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಆರೋಪಿಯ ಸಹಿಯನ್ನು ಪಡೆದು ನಂತರ ಅವನ ಕೈಬರಹದಲ್ಲಿ ಅವನು ತನ್ನ ಹೇಳಿಕೆಯನ್ನು ಬರೆದುಕೊಟ್ಟನು. ಆರೋಪಿಯನ್ನು ಚಾ.ಸಾ-6 ರವರು ಕೆಲಸದಿಂದ ಅಮಾನತ್ತುಗೊಳಿಸಲು ಆದೇಶಿಸಿದರು ಮತ್ತು ಚಾಪಗಾಂವ ಶಾಖಾ ಅಂಚೆ ಕಛೇರಿಯ ಚಾರ್ಜನ್ನು ತನಗೆ ವಹಿಸಿಕೊಟ್ಟರು ಎಂದು ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

5. ಪ್ರಾ.ಸಾ-8 ಮನೋಹರ ಪರಶುರಾಮ ಪಾಟೀಲ ರವರು, ತಾನು ಚಾಪಗಾಂವ ಅಂಚೆ ಕಛೇರಿಯಲ್ಲಿ ಪೋಸ್ಟ ಮಾಸ್ಟರಾಗಿ ಆಗಿ ಕೆಲಸ ಮಾಡಿದ್ದೇನೆ. ಈ ಅಂಚೆ ಕಛೇರಿಯು ತಮ್ಮ ಮನೆನಲ್ಲಿಯೇ ನಡೆಸಲಾಗುತ್ತಿತ್ತು. ತಾನು ಪೋಸ್ಟ ಮಾಸ್ಟರಾಗಿ ಕೆಲಸ ಮಾಡುವ ಕಾಲಕ್ಕೆ ಆರೋಪಿಯು ತಮ್ಮ ಅಂಚೆ ಕಛೇರಿಯಲ್ಲಿ ಪೋಸ್ಟಮ್ಯಾನ್ ಆಗಿ ಕೆಲಸ ಮಾಡುತ್ತಿದ್ಧ ತಾನು ನಿವೃತ್ತಿಯಾದ ನಂತರ ತನ್ನ ಮಗನನ್ನು ತಾತ್ಕಾಲಿಕಾಗಿ ಪೋಸ್ಟ ಮಾಸ್ಟರ್ ಆಗಿ ಅಂಚೆ ಕಛೇರಿಗೆ ನೇಮಕ ಮಾಡಿಕೊಂಡಿದ್ದರು. ನಂತರ ತನ್ನ ಮಗನನ್ನು ತೆಗೆದು ಆರೋಪಿಯನ್ನು ಆ ಕಛೇರಿಗೆ ಪೋಸ್ಟಮಾಸ್ಟರ ಆಗಿ ನೇಮಕಮಾಡಿಕೊಂಡರು. ಒಂದು ದಿನ ಚಾ.ಸಾ-6 ಮತ್ತು 7 ರವರು ತಮ್ಮ ತಮ್ಮ ಅಂಚೆ ಕಛೇರಿಗೆ ಭೇಟಿ ಕೊಟ್ಟು ದಾಖಲೆಗಳನ್ನು ಪರಿಶೀಲಿಸಿದಾಗ ಅದರಲ್ಲಿ 8,000/- ಕ್ಕಿಂತ ಹೆಚ್ಚು ನಗದು ಹಣವನ್ನು ಸ್ವಂತಕ್ಕೆ ಬಳಸಿಕೊಂಡಿರುವಾಗಿ ತಿಳಿಸಿದನು.

ಆರೋಪಿಯು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದ ಹಣವನ್ನು ಇಲಾಖೆಗೆ ತುಂಬುತ್ತೇನೆ ಎಂದು ಹೇಳಿಕೆಯನ್ನು ಬರೆದುಕೊಟ್ಟನು. ಅದೇ ದಿನ ಚಾ.ಸಾ-6 ರವರು ಆರೋೀಯಿಂದ ಪ್ರಭಾರಮ್ನ ತೆಗೆದುಕೊಂಡು ನಂತರ ಗಜಾನನ ಕೆಂಚೆಪ್ಪ ಬೆಳಗಾಂವಕರ ರವರು ಪೋಸ್ಟ ಮಾಸ್ಟರ ಆಗಿ ನೇಮಕ ಮಾಡಲಾಯಿತು. ಅವರು ಅಂಚೆ ಕಛೇರಿಯನ್ನು ತಮ್ಮ ಮನೆಯಿಂದ ಅವರ ಮನೆಗೆ ಸ್ಥಳಾಂತರ ಮಾಡಿದರು ಎಂದು ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

6. ಪ್ರಾ.ಸಾ-9 ಮೈನುದ್ದಿನ ಅಬ್ಬಸಾ ಬೆಳಗಾಂವಕರ ರವರು, ದಿನಾಂಕ 10.04.2006 ರಂದು ಚಾ.ಸಾ-6 ಮತ್ತು 7 ರವರು ಚಾಪಗಾಂವ ಅಂಚೆ ಕಛೇರಿಗೆ ಬಂದು ದಾಖಲೆಗಳನು ಪರಿಶೀಲಿಸಿ ನಗದು ಹಣವನ್ನು ಆರೋಪಿಯು ತನ್ನ ಸ್ವಂತಕ್ಕೆ ಬಳಸಿಕೊಂಡು ಇಲಾಖೆಗೆ ನಂಬಿಕೆ ದ್ರೋಹ ಮಾಡಿದನು. ಈ ಬಗ್ಗೆ ಪೋಲಿಸರು ತನ್ನನ್ನು ವಿಚಾರಿಸದರು ಎಂದು ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

7. ಪ್ರಾ.ಸಾ-10 ಎ.ಮ್. ವಾರಿಮನಿ ರವರು, ದಿನಾಂಕ 31.05.2011 ರಂದು ಚಾ.ಸಾ-11 ರವರು ಬೆಳಗಾವಿಗೆ ಹೋದ ಕಾರಣ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾ.ಸಾ-11 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿ, ಅದೇ ದಿನ ಆರೋಪಿಯನ್ನು ಚಾಪಗಾಂವದಲ್ಲಿ ದೊರೆತ್ತಿದ್ದ ಆತನನ್ನು ದಸ್ತುಗಿರಿ ಮಾಡಿ ಸೂಕ್ತ ಬೆನ್ನಗಾವಲಿನೊಂದಿಗೆ ನ್ಯಾಯಾಲಕ್ಕೆ ಹಾಜರು ಪಡಿಸಿ, ಪ್ರಕರಣದ ತನಿಖೆಯನ್ನು ಚಾ.ಸಾ-11 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

8. ಪ್ರಾ.ಸಾ-11 ಆನಂದ ಮಹಾವೀರ ಒದಕುದ್ರೆರವರು, ದಿನಾಂಕ 09.02.2011 ರಂದು ಸಂಜೆ 06.30 ಗಂಟೆಗೆ ಚಾ.ಸಾ-1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಕೊಟ್ಟಿದ್ದು, ಅದನ್ನು ಸ್ವೀಕರಿಸಿ ತಮ್ಮ ಠಾಣಾ ಗುನ್ನಾ ಸಂಖ್ಯೆ 29/11 ರಲ್ಲಿ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು ಎಂದು ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

9. ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ?

ಉತ್ತರಃ

10. ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ?

ಉತ್ತರಃ

(ಮೇಲ್ಕಾಣಿಸಿದ ಪ್ರಶ್ನೆಯನ್ನು ಆರೋಪಿಗೆ ಓದಿ ಹೇಳಿ ಅವರೆ ನೀಡಿದ ಉತ್ತರವನ್ನು ದಾಖಲು ಮಾಡಿರುತ್ತೇವೆ)

ಖಾನಾಪೂರ

ದಿನಾಂಕಃ 05.06.2023

(ವಿರೇಶ ಹಿರೇಮಠ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.